

ಸಂತಾನವೃದ್ಧಿಗೆ ಲಗ್ಗೆ ಇಡುವ ಸಮುದ್ರ ಆಮೆಗಳು

ಯಾವ ಕಡೆ ಕಣ್ಣು ಹಾಯಿಸಿದರೂ ದೂರ ಹರಡಿದ್ದ ಹವಳದ ತುಂಡುಗಳು. ಹವಳದ ಬಿಳಿಚನ್ನು ಕಡಿಮೆ ಮಾಡಲೋ ಎಂಬಂತೆ ಅಲ್ಲಲ್ಲಿ ರಂಗುರಂಗಿನ ನಾನಾ ಗಾತ್ರದ ಕಪ್ಪೆಚಿಪ್ಪುಗಳು, ಕವಡೆಗಳು, ಸಮುದ್ರ ಮೃದ್ವಂಗಿಗಳ, ಮೀನುಗಳ ಅವಶೇಷಗಳು. ನಮ್ಮ ಮಾರ್ಗದರ್ಶಿ ದ್ವೀಪದ ಬಗ್ಗೆ ಮುಖ್ಯ ಮಾಹಿತಿಗಳನ್ನು ವಿವರಿಸುತ್ತಾ ನಮ್ಮನ್ನು ಒಂದು ದಡದಲ್ಲಿ ಮಾತ್ರ ಸುತ್ತಾಡಿಸಿದರು. ಹವಳದ ಮಣ್ಣಿನಿಂದ ಬೆಳೆದ ವಿಶೇಷ ಮರಗಿಡಗಳು ಮತ್ತು ಆ ಮರಗಳಲ್ಲಿ ಗೂಡು ಕಟ್ಟಿಕೊಂಡು ನಮ್ಮನ್ನು ಪಿಳಿಪಿಳಿ ನೋಡುತ್ತಾ ಕೂತಿದ್ದ ನೂರಾರು ನಾಡೀಸ್ ಪಕ್ಷಿಗಳನ್ನು ಹತ್ತಿರದಿಂದ ನೋಡಿದ್ದು ಕುತೂಹಲಕಾರಿಯಾಗಿತ್ತು.

ದ್ವೀಪದಲ್ಲಿ ಮನುಷ್ಯರು ತಿನ್ನುವ ಆಹಾರವಿಲ್ಲ, ಕುಡಿಯಲು ಸಿಹಿ ನೀರಿಲ್ಲ. ತಮ್ಮದೇ ಆದ ಟೆಂಟ್, ಆಹಾರ, ನೀರು ವ್ಯವಸ್ಥೆ ಮಾಡಿಕೊಂಡು ಬಂದು ಇಲ್ಲಿ ಒಂದೆರಡು ರಾತ್ರಿಗಳು ತಂಗಲು ಸರ್ಕಾರದ ಅನುಮತಿಯಿದೆ. ಒಂದು ರಾತ್ರಿಗೆ ತಲಾ ಏಳೂವರೆ ಡಾಲರ್. ಆಸ್ಟ್ರೇಲಿಯಾದ ಮುಖ್ಯ ಬೇಸಿಗೆ ರಜೆ ಕಾಲವಾದ ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಅನೇಕರು ಬರುತ್ತಾರೆ. ನಮ್ಮನ್ನು ಕರೆದೊಯ್ದ ದಡದಲ್ಲಿ ಅಲ್ಲಲ್ಲಿ ಕೆಲವು ಟೆಂಟ್, ಯುವಕ–ಯುವತಿಯರು ಕಾಣಿಸಿದರು. ಸಂಜೆಯಾದರೆ ಸಾಕು, ಮೊಟ್ಟೆಯಿಡಲು ಸಮುದ್ರದಿಂದ ದಡಕ್ಕೆ ಬರುವ ಲಾಗರ್ ಹೆಡ್ ಆಮೆಗಳನ್ನು ಮತ್ತು ದಡದಿಂದ ಪುಟ್ಟಪುಟ್ಟ ಹೆಜ್ಜೆಗಳನ್ನಿಟ್ಟುಕೊಂಡು ಸಮುದ್ರ ಸೇರುವ ಆಮೆ ಮರಿಗಳನ್ನು ನೋಡುತ್ತಾ ಇಡೀ ರಾತ್ರಿ ಕಳೆಯುವ ಅದೃಷ್ಟ ಅವರದ್ದು! ಆದರೆ, ದಿನದ ಹೊತ್ತಿನ ಬಿಸಿಲು ಮಾತ್ರ ಹೇಳತೀರದು! ಸಾಕಷ್ಟು ಮುಂಚೆಯೇ ವಿಚಾರಿಸಿದರೆ ಡಾಕ್ ಸ್ಟೇಷನ್‌ನಲ್ಲೂ ರೂಮ್ ಸಿಗುತ್ತದೆ.

ದ್ವೀಪದ ಭೇಟಿ ನಂತರ ಅದೇ ಗಾಜಿನ ತಳದ ದೋಣಿಗೆ ವಾಪಸ್ಸಾಗಿ ದೊಡ್ಡ ಪ್ರವಾಸಿ ದೋಣಿಗೆ ಬಂದು ಬಹುತವಕದಿಂದ ಸ್ನಾರ್ಕ್ಲಿಂಗ್ ಅನುಭವಕ್ಕಾಗಿ ಎದುರುನೋಡುತ್ತಾ ಕೂತಿದ್ದೆವು. ಮಧ್ಯದಲ್ಲಿ ಊಟವೂ ಆಗಿತ್ತು. ಲೇಡಿ ಮಸ್‌ಗ್ರೇವ್ ಹವಳದ್ವೀಪ ಪ್ರವಾಸದ ಮುಖ್ಯಭಾಗವಿದು. ತಂಡದ ಸಿಬ್ಬಂದಿ ನಮ್ಮ ಮುಖಗಾತ್ರಕ್ಕೆ ಹೊಂದುವಂತೆ ಕೊಡುವ ಸ್ನಾರ್ಕ್ಲಿಂಗ್ ಸೆಟ್ ಮತ್ತು ಪಾದಗಳಿಗೆ ಹೊಂದುವ ಫಿನ್ ಸೆಟ್ ಧರಿಸಿ ಸಮುದ್ರದಲ್ಲಿಳಿದಾಗ ಹೇಳತೀರದ ರೋಮಾಂಚನ, ಕುತೂಹಲ, ಉಲ್ಲಾಸ. ಜೊತೆಗೆ ಢವಗುಟ್ಟುವ ಹೃದಯ! ಚೆನ್ನಾಗಿ ಈಜುವವರು, ಅಷ್ಟಿಷ್ಟು ಈಜುಬಲ್ಲವರು ಎಲ್ಲರಿಗೂ ತಲಾ ಒಂದು ಈಜು ನೂಡಲ್ ಕೊಟ್ಟಿರುತ್ತಾರೆ. ಸುಸ್ತಾದಾಗ ಈಜುವುದನ್ನು ನಿಲ್ಲಿಸಿ ಈ ನೂಡಲ್ ಹಿಡಿದುಕೊಂಡು ನೀರಲ್ಲಿ ತೇಲಾಡುತ್ತಾ ಸುಧಾರಿಸಿಕೊಳ್ಳಬಹುದು. ಮುಖಕ್ಕಿದ್ದ ಮಾಸ್ಕ್ ತೆಗೆದು ಹೊಸ ಗಾಳಿ ಉಸಿರಾಡಬಹುದು.

ಲೇಡಿ ಮಸ್‌ಗ್ರೇವ್ ದ್ವೀಪದ ಸುತ್ತಲೂ ಉಂಗುರದಂತೆ ಸುಮಾರು 3000 ಎಕರೆ ಪ್ರದೇಶದಷ್ಟು ಹವಳ ಜೀವಜಾಲ ಸರಪಣಿ ಹರಡಿದೆ. ಬೇರೆಬೇರೆ ಗಾತ್ರದಲ್ಲಿ ಹವಳ ಗುಡ್ಡೆಗಳು ಬೆಳೆದಿವೆ. ಕೆಲವು ಹಳತಾಗಿದ್ದರೆ, ಹಲವು ಹೊಸ ಹವಳ ಗುಡ್ಡೆಗಳು. ಇದನ್ನು ಆಧರಿಸಿ ಹವಳದ ಕೆಂಪು ಬಣ್ಣ ಬೇರೆಬೇರೆಯಾಗಿ ಕಾಣುತ್ತದೆ. ನಸುಗೆಂಪು, ಮಾಸಿದಂಥ, ಉಜ್ಜಿಹೋದಂಥ, ಸವೆದಿರುವ, ಹೊಸಗೆಂಪು, ಬಿಳಿಚಿರುವ ಬಣ್ಣಗಳಲ್ಲಿ ಕಾಣುತ್ತದೆ. ನಿಧಾನವಾಗಿ ನಾವು ಈಜುತ್ತಾ ಹವಳದ ಗುಡ್ಡೆಗಳನ್ನು ನೋಡುವುದು ಅಲೌಕಿಕ ಅನುಭವ.



ದ್ವೀಪದಲ್ಲಿರುವ ನಾಡೀಸ್ ಪಕ್ಷಿಸಂಕುಲ

ಸ್ನಾರ್ಕ್ಲಿಂಗ್ ಕೊಳವೆ ಮೂಲಕ ಉಸಿರಾಡುತ್ತಾ, ಮುಖವನ್ನು ನೀರಿನಲ್ಲಿ ಹುದುಗಿಸಿದಾಗ ಕಂಡದ್ದು ಶಬ್ದಗಳಲ್ಲಿ ಕಟ್ಟಿಡಲಾಗದ ಅದ್ಭುತ ರಮ್ಯಲೋಕ! ನವಿಲಿನ ಬಾಲದಲ್ಲಿರುವ ಪಚ್ಚೆನೀಲ ವರ್ಣಕ್ಕೂ ಮಿಗಿಲಾದ ಅಸದಳ ಸೌಂದರ್ಯದಿಂದ ಕೂಡಿರುವ ಆ ಸಾಗರದ ಹೊಟ್ಟೆಯಲ್ಲಿ ಅಷ್ಟೇ ಸುಂದರವಾದ ನಿರ್ಮಲ ನಿರುಪಮ ಚೆಲುವಿನ ವಾಸಿಗಳು ಸಾವಧಾನದಿಂದ ಶಾಂತವಾಗಿ ಓಡಾಡುತ್ತಿದ್ದವು. ಸಮುದ್ರ ಆಮೆಗಳು, ರೀಫ್ ಶಾರ್ಕ್, ಮಂಟಾ ರೇ, ಅನೇಕಾನೇಕ ಮೀನು ಜಾತಿಗಳು, ಮೃದ್ವಂಗಿಗಳು, ಅಲ್ಲಲ್ಲಿ ಜೆಲ್ಲಿ ಫಿಶ್, ಅವುಗಳ ಪಾಡಿಗೆ ಅವು ಈಜಾಡುತ್ತಿದ್ದವು. ನಮ್ಮ ಮುಂದೆ ನವರತ್ನಗಳನ್ನು ಚೆಲ್ಲಾಡಿದಂತೆ ಇತ್ತು. ಮಾಸ್ಕ್ ಧರಿಸಿದ್ದ ನಮ್ಮನ್ನು ನೋಡಿ ಕೆಲವು ಹವಳದ ರಾಶಿ ಹೊಕ್ಕು ಈಚೆ ಬರದೇ ನಾಚಿಕೊಂಡಿದ್ದವು. ಆಮೆಯೊಂದನ್ನು ಕಂಡಾಗ ನೀರಿನಲ್ಲಿ ಇನ್ನೂ ಕೆಳಕ್ಕೆ ಈಜಿಕೊಂಡು ಹೋಗಿ ಅದನ್ನು ಮುಟ್ಟಿನೋಡುವ ಆಸೆಯಾಯಿತು. ಆದರೆ ಅದು ಅಪಾಯಕಾರಿ. ಅದೂ ಅಲ್ಲದೆ ನೀರಿನಾಳಕ್ಕೆ ಹೋಗಬೇಡಿ ಎಂದು ಮೊದಲೇ ಎಚ್ಚರಿಕೆ ಕೊಟ್ಟಿದ್ದರು. ನಿಸರ್ಗದಲ್ಲಿರುವ ಜೀವಿಗಳನ್ನು ದೂರದಿಂದ ನೋಡಿ ಆನಂದಿಸುವುದೇ ಒಳ್ಳೆಯದು.

ಸುಮಾರು ಮುಕ್ಕಾಲು ಗಂಟೆ ಸ್ನಾರ್ಕ್ಲಿಂಗ್ ಮಾಡುತ್ತಾ ಅಲೌಕಿಕ ಅನುಭವವನ್ನು ಆಸ್ವಾದಿಸುತ್ತಾ ಆಗಾಗ ಮುಖ ಮೇಲೆ ಮಾಡಿ ತೇಲಾಡುತ್ತಾ ಸಮುದ್ರದಲ್ಲಿ ನಾವೂ ಒಂದು ಚಿಕ್ಕ ಚುಕ್ಕಿಯಾಗಿಬಿಡುತ್ತೇವೆ. ನಮ್ಮ ನಗರ ಜೀವನದ ನಾಗರಿಕತೆ, ದಿನನಿತ್ಯದ ಜಂಜಾಟಗಳು, ಚಿಂತೆಗಳು ಆ ಕೆಲವು ಕ್ಷಣಗಳಲ್ಲಿ ಸಂಪೂರ್ಣ ಮರೆಯಾಗಿಬಿಡುತ್ತದೆ. ಪ್ರಕೃತಿಯ ಮಹಾನ್ ಶಕ್ತಿಮೂಲಗಳಲ್ಲಿ ಒಂದಾದ ನೀರು ನಮಗೆ ಸಾಂತ್ವನ ನೀಡುವ, ಮೈಮನಗಳನ್ನು ಹಿತವಾಗಿ ತಡವುತ್ತಾ ಚೇತನ ಕೊಡುವ ಮಾತೃಸೆಲೆಯ ಪ್ರೀತಿಯಂತೆ ಅನಿಸಿತು.

ಸ್ನಾರ್ಕ್ಲಿಂಗ್ ನಂತರ ಎಲ್ಲರೂ ಮಾಸ್ಕ್ ತೆಗೆದಿಟ್ಟು ನೂಡಲ್ ಹಿಡಿದುಕೊಂಡು 'ಫ್ರೀ ಸ್ವಿಮ್ಮಿಂಗ್' ಮಾಡಲು ನಮಗೆ ಅವಕಾಶ ಕೊಟ್ಟರು. ಎಲ್ಲರೂ ಕೇಕೆ ಹಾಕುತ್ತಾ ಪುನಃ ನೀರಿಗೆ ಧುಮುಕಿದ್ದೇ ಆಯ್ತು! ಮತ್ತೆ ಒಂದರ್ಧ ಗಂಟೆ ಹಾಗೆಯೇ ಈಜಾಡಿ, ತೇಲಾಡಿ, ನಲಿದಾಡಿ ಆನಂದಿಸಿ ದೋಣಿಗೆ ಮರಳಿದೆವು. ನಮ್ಮ ಈಜುಡುಗೆಯಿಂದ ಮಾಮೂಲಿ ಉಡುಪಿಗೆ ಮರಳಿ ಸ್ವಲ್ಪ ಕೈಕಾಲು ಅಲ್ಲಾಡಿಸಿ ದೋಣಿಯ ಮೇಲ್ಭಾಗಕ್ಕೆ ಹೋಗಿ ಕೂತಾಗ ಹವಳ ಸುಂದರಿಗೆ ಟಾಟಾ ಹೇಳುವ ಸಮಯ ಬಂತು. ನಮ್ಮ ಮೇಲೆ ಅನುಗ್ರಹ ತೋರಿದ ಆ ಜೀವಿಗಳನ್ನು ಬೀಳ್ಕೊಟ್ಟು ಅವರ ಲೋಕದಿಂದ ನಾವು ಕೃತಜ್ಞತಾ ಭಾವದಿಂದ ನಿರ್ಗಮಿಸಿದರೆ ನಮ್ಮ ಹವಳದ್ವೀಪ ಪ್ರವಾಸಕ್ಕೆ ಅರ್ಥ ಬರುತ್ತದೆ ಎಂದೆನಿಸಿ ಟಾಟಾ ಹೇಳಿದೆ. ದೋಣಿಯ ಮೇಲ್ಗಡೆ ಡೆಕ್ ಭಾಗದಲ್ಲಿ ಕೂತು ಮತ್ತೆ ಆ ವಿಶಾಲ ಪಚ್ಚೆನೀಲ ಸ್ಫಟಿಕ ಸಾಗರವನ್ನು ನೋಡುತ್ತಾ ಕೂತಾಗ ಮನಸ್ಸು ತೃಪ್ತಿಯಿಂದ ಕೂಡಿತ್ತು.

ಪ್ರತಿಕ್ರಿಯಿಸಿ: feedback@sudha.co.in